ಮೊದಲೇ ಬಂದು ದೇವರ ದರ್ಶನ ಪಡೆದು ಜಂಭ ಕೊಚ್ಚಿಕೊಳ್ಳ ಬೇಕೆಂದಿರುವನೇನೋ! ನೋಡೋಣ. ಊರಿಗೆ ಹೋದ ಮೇಲಾದರೂ ಸಿಕ್ಕೇ ಸಿಗುವನು. ಎಲ್ಲಿ ಹೋಗುವನು?" ಎಂದು ರವಿ ತನಗೆ ತಾನೇ ಸಮಾಧಾನ ಮಾಡಿಕೊಂಡು ಸೋಮನಹಳ್ಳಿಗೆ ಹಿಂದಿರುಗಿದ.

ರವಿ ಸ್ವಲ್ಪ ಸುಧಾರಿಸಿಕೊಂಡು ಆಯಾಸ ಪರಿಹರಿಸಿಕೊಂಡ ನಂತರ ಗೌತಮನ ಮನೆ ಕಡೆ ನಡೆದ. ಆ ವೇಳೆಗಾಗಲೇ ಗೌತಮನು ಹಿಂತಿರುಗಿರುವುದನ್ನು ಕಂಡು, ರವಿಗೆ ಅವನ ಮೇಲೆ ಬಹಳ ಕೋಪ ಸಹ ಬಂದಿತು. ಆದರೆ ಗೌತಮನು ರವಿಯನ್ನು ಆದರದಿಂದ ಬರ ಮಾಡಿಕೊಂಡು, "ಹೇಗಾಯಿತಪ್ಪಾ, ತಿರುಮಲೈ ಯಾತ್ರೆ? ನೀನೇ ಪುಣ್ಯವಂತ, ತಿರುಪತಿ ಯಾತ್ರೆ ಮಾಡಿ ಬಾಲಾಜಿ ದರ್ಶನ ಪಡೆದು ಬಂದೆ" ಎನ್ನಲು ರವಿಗೆ ಅತ್ಯಾಶ್ಚರ್ಯವಾಯಿತು.

"ಓಹ್! ನೀನು ಸುಮ್ಮನೆ ತಮಾಷೆ ಮಾಡಬೇಡಪ್ಪಾ, ನಿಧಾನ ವಾಗಿ ಬರುವೆನೆಂದು ಹೇಳಿ, ನನಗಿಂತ ಮೊದಲೇ ನೀನು ಸ್ವಾಮಿ ದರ್ಶನ ಪಡೆದೆಯಲ್ಲಾ? ಕೂಗಿದರೂ ಕೇಳಿಸದವನಂತೆ ನಟಿಸಿದೇ?"

ಈಗ ಅಚ್ಚರಿ ಪಡುವುದು ಗೌತಮನ ಸರದಿಯಾಗಿತ್ತು. "ಇಲ್ಲ ರವಿ, ಹಳ್ಳಿಯ ಜನರಿಗಾಗಿ ಎರಡು ದಿನ ಅಲ್ಲೇ ಉಳಿದೆ. ಆ ಹಳ್ಳಿಯ ಜನರ ಸೇವೆಗಾಗಿ ನನ್ನ ಬಳಿ ಉಳಿದಿದ್ದ ಹಣವನ್ನು ಅಲ್ಲೇ ಖರ್ಚುಮಾಡಿದೆ. ಅಮ್ಮ ಬುತ್ತಿಯಾಗಿ ಕಟ್ಟಿಕೊಟ್ಟಿದ್ದ ಅವಲಕ್ಕಿ, ಉಂಡೆಗಳನ್ನು ಸಹ ಅವರಿಗೇ ಹಂಚಿದೆ. ಆದರಿಂದ ಕೇವಲ ಕೆಲವು ಜನರಿಗಷ್ಟೇ ನಾನು ಸೇವೆ ಮಾಡಲು ಸಾಧ್ಯವಾಯಿತು. ಸ್ವಲ್ಪಮಟ್ಟಿಗೆ ಅವರು ಸುಧಾರಿಸಿ, ಚೇತರಿಸಿಕೊಂಡರು. ಯಾತ್ರೆ ಮುಂದುವರಿಸಲು ನನ್ನ ಬಳಿ ಸಾಕಷ್ಟು ಹಣ ಉಳಿಯಲಿಲ್ಲ. ಆದರೆ ಕೆಲವರಿಗಾದರೂ ಸೇವೆ ಮಾಡುವ ಭಾಗ್ಯ ನನಗೆ ದೊರೆಯಿತು. ಬೇಸರ ವಿಲ್ಲದೇ, ಸಂತೋಷವಾಗಿ ಸೋಮನಹಳ್ಳಿಗೆ ಹಿಂದಿರುಗಿ ನಿನಗಾಗಿ ಕಾಯುತ್ತಿರುವೆ. ತಿರುಪತಿಯ ವೈಭವವನ್ನು ನೀನು ಕಣ್ಣಾರೆ ಕಂಡಿರುವೆ. ಅದನ್ನಾದರೂ ನಿನ್ನ ಬಾಯಿಂದ ಕೇಳುವ ತವಕವಾಗಿದೆ. ತಿಳಿಸು ವೆಯಾ?" ಎಂದನು.

ರವಿಗೆ ನಿಜವಾಗಲೂ ವಿಚಿತ್ರವೆನಿಸಿತು. ಆಗ ರವಿಯು "ಬಾಲಾಜಿಯ ಅತಿ ಸಮೀಪದಲ್ಲಿ ಕಂಡ ಆ ಗೌತಮನಾರು?" ಎಂದು ವಿಸ್ಮಯಗೊಂಡನು. ಆಗ ರವಿಯ ಮನಸ್ಸಿಗೆ ನಿಜದ ಅರಿವಾಯಿತು. ಕೂಡಲೆ ಗೌತಮನನ್ನು ಬಾಚಿ ತಬ್ಬಿಕೊಂಡು, ನಂತರ ಅವನ ಎರಡು ಕೈಗಳನ್ನು ಹಿಡಿದು, "ನೀನೇ ಪುಣ್ಯವಂತ, ದೀನದಲಿತರ ನಿಸ್ವಾರ್ಥ ಸೇವೆಯಿಂದ ನೀನು ನನಗಿಂತ ಮೊದಲೇ ದೇವರ ದರ್ಶನ ಪಡೆದೆ; ಭಗವಂತನ ಸಾಮೀಪ್ಯವನ್ನು ಅನುಭವಿಸಿದೆ, ನೀನೇ ಧನ್ಯ" ಎಂದು ಆನಂದ ಬಾಷ್ಪವನ್ನು ಸುರಿಸಿದನು.

ಕಷ್ಟದಲ್ಲಿರುವ ಜನರ ಸೇವೆಯೇ ಜನಾರ್ದನನ ಸೇವೆ ಎಂದು ಆಗ ರವಿಗೆ ಅರಿವಾಯಿತು. ❖

# ಠಾಕುರರ ಐದು ಆದರ್ಶಗಳು

ಹೆಚ್.ಎನ್. ಮುಕುಂದಸ್ವಾಮಿ

**ಶ್ರೀರಾಮಕೃಷ್ಣರ ಪ್ರಸಿದ್ಧ ಗೃಹಿಶಿಷ್ಯರಾದ ಮಹೇಂದ್ರನಾಥ ಗುಪ್ತರ ಜೀವನ ಮತ್ತು ಬೋಧನೆಗೆ ಸಂಬಂಧಿಸಿದ *Apostle and Evangelist* ಎಂಬ ಗ್ರಂಥದ ಒಂದು ಭಾಗದ ಅನುವಾದವಾಗಿದೆ ಈ ಲೇಖನ. ಅನುವಾದಿಸಿದವರು ಬೆಂಗಳೂರು ಶ್ರೀ ರಾಮಕೃಷ್ಣ ಮಠದ ಭಕ್ತರಾದ ಶ್ರೀ ಹೆಚ್. ಎನ್. ಮುಕುಂದಸ್ವಾಮಿಯವರು.**

ವೀಳೆಯದೆಲೆಯ ಪ್ರಸಂಗ

[ಶ್ರೀರಾಮಕೃಷ್ಣರನ್ನು ಬಂಗಾಳಿ ಭಾಷೆಯಲ್ಲಿ "ಠಾಕುರ್" (ಅಂದರೆ ದೇವರು) ಎಂದು ಕರೆಯುತ್ತಾರೆ.]

**ಮಹೇಂದ್ರನಾಥ ಗುಪ್ತ**: ಠಾಕುರರು ಎಷ್ಟು ಎಚ್ಚರ ದಿಂದ ಇರುತ್ತಿದ್ದರು! ಅವರು ಯಾವುದನ್ನೂ ಕೂಲಂಕಷವಾಗಿ ಗಮನಿಸದೆ ಇರುತ್ತಿರಲಿಲ್ಲ. ಒಬ್ಬ ವ್ಯಕ್ತಿ ಮೂರುಕಾಸಿಗೆ ಹತ್ತು ವೀಳೆಯದೆಲೆಯ ಬದಲು ಆರನ್ನು ತಂದನು. ಆಗ ಠಾಕುರರು ಆ ವ್ಯಕ್ತಿಯನ್ನು ಕೂಡಲೇ ತರಾಟೆಗೆ ತೆಗೆದುಕೊಂಡರು, "ನೀನೇಕೆ ಮೋಸಕ್ಕೆ ಒಳಗಾದೆ? ನೀನು ಕೊಟ್ಟ ಬೆಲೆಗೆ ಸರಿಯಾಗಿ ವೀಳೆಯ ದೆಲೆ ತರಬೇಕಾಗಿತ್ತು. ಹೆಚ್ಚಿಗೆ ಕಾಸಿದ್ದರೆ ದಾನ ಮಾಡು. ಆದರೆ ಯಾರಿಂದಲೂ ಯಾವ ಕಾರಣಕ್ಕಾಗಿಯೂ ಮೋಸ ಹೋಗಬೇಡ." ಈ ಮಾತು ಅರ್ಥಗರ್ಭಿತವಾಗಿದೆ. ಇದೇ ರೂಢಿಯಾದರೆ ಮೋಸ ಹೋಗುವುದೇ ಮನಸ್ಸಿನ ಸ್ವಭಾವವಾಗಿ ಬಿಡುತ್ತದೆ. ಕಡೆಗೆ ಕಾಮ ಕಾಂಚನದಲ್ಲಿಯೂ ಮೋಸಕ್ಕೆ ಒಳಗಾಗಬೇಕಾಗುತ್ತದೆ. ಬೇರೆ ಮಾತು ಗಳಲ್ಲಿ ಹೇಳಬೇಕೆಂದರೆ ಬೇಜವಾಬ್ದಾರಿತನ ರೂಢಿಯಾಗುತ್ತದೆ. ಠಾಕುರರು ಆಗಾಗ್ಗೆ ಹೇಳುತ್ತಿರಲಿಲ್ಲವೇ, "ಭಕ್ತನಾಗು, ಆದರೆ ಮೂರ್ಖನೇಕೆ ಆಗಬೇಕು? ಸಾಧಕನು ಎಲ್ಲ ಕಡೆಯೂ ನಿಗಾ ಇರಿಸ ಬೇಕು, ಸದಾ ಸೈನಿಕನಂತೆ ಜಾಗರೂಕನಾಗಿರಬೇಕು. ಯಾವಾಗ ಎಲ್ಲಿಂದ ಆಕ್ರಮಣವಾಗುವುದೋ!"

ಠಾಕುರರು ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಸಾಮಾನ್ಯವಾಗಿ ಕೆಲವರು ಅಂದುಕೊಳ್ಳುತ್ತಾರೆ, ಏನು ಮಹಾ ಕೊಳ್ಳೆ ಹೋದದ್ದು? ಕೆಲವು ವೀಳೆಯದೆಲೆಗಳಿಗೆ ಇಷ್ಟೊಂದು ಬಯ್ಗುಳವೇ? ಎಂದು. ಆದರೆ ವಾಸ್ತವದಲ್ಲಿ ಅದು ಹಾಗಲ್ಲ. ಠಾಕುರರ ಮಾತಿನಲ್ಲಿ ಹೆಚ್ಚು ಸತ್ವ ಇದೆ. ಅದು ಶೀಲದ ಮೇಲೆ ಪ್ರಭಾವ ಬೀರುತ್ತದೆ. ಆದಕ್ಕಾಗಿಯೇ ಸದಾ ಎಚ್ಚರಿಕೆ.

ಅದೂ ಅಲ್ಲದೆ, ಧರ್ಮ ಎನ್ನುವುದು ಈಗ ಬಾಹ್ಯವಿಷಯಗಳಲ್ಲಿ ಅಲಕ್ಷ್ಯದಿಂದ ಇರುವುದು ಎಂದಾಗಿದೆ. ಆದರೆ ಠಾಕುರರು ಇದನ್ನು



ದಕ್ಷಿಣೇಶ್ವರದ ಕಾಳೀ ದೇವಾಲಯದಲ್ಲಿರುವ ಶ್ರೀರಾಮಕೃಷ್ಣರ ಕೊಠಡಿ

ಸಹಿಸುತ್ತಿರಲಿಲ್ಲ. ಅವರು ಹೇಳುತ್ತಿದ್ದರು : "ಇದು ಖಂಡಿತ ತಮೋ ಗುಣದ ಪರಿಣಾಮ." ಭಕ್ತನಾದವನು ಹೇಗೆ ಇರಬೇಕು ಎಂದು ಗೀತೆಯಲ್ಲಿ ಹೀಗೆ ಹೇಳಿದೆ: **ಧೃತ್ಯುತ್ಸಾಹ ಸಮನ್ವಿತಃ** (18-26) "ಸ್ಥಿರತೆ ಮತ್ತು ಉತ್ಸಾಹದಿಂದ ಕೂಡಿದವನು."

ಠಾಕುರರಿಗೆ ಮೈಮೇಲಿನ ಬಟ್ಟೆಯ ಪ್ರಜ್ಞೆಯೇ ಇರುತ್ತಿರಲಿಲ್ಲ, ಸದಾ ಸಮಾಧಿಯಲ್ಲಿರುತ್ತಿದ್ದರು. ಆದರೆ ಡಬ್ಬಿಯಲ್ಲಿ ಸಾಕಷ್ಟು ಎಣ್ಣೆ ಇದೆಯೆ ಎಂದೂ ವಿಚಾರಿಸುತ್ತಿದ್ದರು. ಅವರು ವಿಶೇಷವಾಗಿ ಈ ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು :

ಸ್ವಚ್ಛತೆ: ಮೊದಲನೆಯದಾಗಿ, ಶುಭ್ರತೆ ಮತ್ತು ಅಚ್ಚುಕಟ್ಟು. ಸಾಮಾನ್ಯವಾಗಿ ಜನರು ಅಭ್ಯಾಸಮಾಡಿಕೊಂಡ ಸೋಮಾರಿ ತನದಿಂದ ಕೊಳಕಾಗಿರುತ್ತಾರೆ. ದೇವರ ಧ್ಯಾನದಿಂದ ತಮ್ಮ ದೇಹ ವನ್ನು ಎಷ್ಟು ಜನ ತಾನೆ ಮರೆಯಬಲ್ಲರು? ಶುಭ್ರತೆ ಮತ್ತು ಅಚ್ಚು ಕಟ್ಟು ಇಲ್ಲದಿದ್ದರೆ ದೇವರ ಆವಾಹನೆ ಸಾಧ್ಯವಿಲ್ಲ. ಒಳಗೂ ಹೊರಗೂ ಶುದ್ಧವಾಗಿರಬೇಕು.

ಮಿತವ್ಯಯ: ಎರಡನೆಯದಾಗಿ ದುಂದು ವೆಚ್ಚ ಮಾಡ ಬಾರದು. ಜನರು ಅನೇಕ ವಸ್ತುಗಳನ್ನು ವ್ಯರ್ಥಮಾಡುತ್ತಾರೆ. ಠಾಕುರರು ಅದನ್ನು ಸಹಿಸುತ್ತಿರಲಿಲ್ಲ. ಕಾಶೀಪುರದಲ್ಲಿ ಒಂದು ಸಾರಿ ಠಾಕುರರಿಗಾಗಿ ಒಂದು ನಿಂಬೆ ಹಣ್ಣಿಗೆ ಬದಲು ಆರನ್ನು ಕತ್ತರಿಸ ಲಾಯಿತು. ಠಾಕುರರು ಅದನ್ನು ಖಂಡಿಸಿ ಹೇಳಿದರು : "ಭಕ್ತರು ಹಣ ಗಳಿಸಲು ಎಷ್ಟು ಕಷ್ಟಪಡುತ್ತಾರೆ. ಅವರ ಹಣದಿಂದ ನಮ್ಮ ಸೇವೆ ಆಗುತ್ತಿದೆ. ಅದನ್ನೇಕೆ ಪೋಲು ಮಾಡಬೇಕು?" ಮತ್ತೆ ಹೇಳಿ ದರು : "ದುಂದುಗಾರನಾಗಿರುವುದಕ್ಕಿಂತ ಜಿಪುಣನಾಗಿರುವುದು ಮೇಲು." ವಾಸ್ತವವಾಗಿ ಎರಡೂ ಸರಿಯಲ್ಲ. ಆದರೆ ದುಂದು ಗಾರಿಕೆಗಿಂತ ಜಿಪುಣತೆ ಲೇಸು. ಊಟ ಮಾಡುವಾಗ ಅನೇಕರು ಆಹಾರ ಪದಾರ್ಥಗಳನ್ನು ಚೆಲ್ಲುತ್ತಾರೆ. ಠಾಕುರರಿಗೆ ಅದು ಸುತರಾಂ ಇಷ್ಟ ವಾಗುತ್ತಿರಲಿಲ್ಲ. ಸ್ವಲ್ಪ ಆಹಾರವನ್ನು ನಾಯಿಗಳಿಗೆ ಮಿಗಿಸಿಡಬೇಕು, ಹಾಗಲ್ಲದಿದ್ದರೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಡಿಸಿ ಕೊಳ್ಳಬೇಕು. ಯಾವುದನ್ನೂ ವ್ಯರ್ಥ ಮಾಡ ಬಾರದು.

ಬಟ್ಟೆಬರೆ: ಮೂರನೆಯದಾಗಿ ಹರಿದ ಅಥವಾ ಕೊಳಕು ಬಟ್ಟೆಗಳನ್ನು ಠಾಕುರರು ಸಹಿಸುತ್ತಿರಲಿಲ್ಲ. ಠಾಕುರರು ಹೇಳಿದ್ದಾರೆ: "ತೇಪೆ ಹಾಕಿದ ಬಟ್ಟೆಗಳನ್ನು ಧರಿಸಿದವರು ದರಿದ್ರರಾಗುತ್ತಾರೆ."

ಅಚ್ಚುಕಟ್ಟುತನ : ನಾಲ್ಕನೆಯದಾಗಿ ವ್ಯವಸ್ಥಿತವಾಗಿರುವ ಅಭ್ಯಾಸವನ್ನು ರೂಢಿಸಿ ಕೊಳ್ಳುವುದು. ನಾವು ಬಳಸುವ ವಸ್ತುಗಳನ್ನು ಬೇಕಾಬಿಟ್ಟಿ ಎಲ್ಲೆಂದರಲ್ಲಿ ಇಡಬಾರದು. ಪ್ರತಿ ಯೊಂದು ವಸ್ತುವನ್ನೂ ಅದರ ಸರಿಯಾದ ಸ್ಥಳದಲ್ಲಿ ಕಲಾತ್ಮಕವಾಗಿ ಇರಿಸಬೇಕು.

ಸ್ವಯಂಪಾಕ: ಐದನೆಯದಾಗಿ ತನ್ನ ಅಡುಗೆಯನ್ನು ತಾನೇ ಮಾಡಿಕೊಳ್ಳಬೇಕು. ಠಾಕುರರು ಹೇಳಿದ್ದಾರೆ : "ತೀವ್ರವಾದ ಆಧ್ಯಾತ್ಮಿಕ ಸಾಧನೆಗಳಲ್ಲಿ ತೊಡಗಿರುವ ಸಾಧಕರು ತಮ್ಮ ಅನ್ನವನ್ನು ತಾವೇ ಬೇಯಿಸಿಕೊಂಡು ದೇವರಿಗೆ ನೈವೇದ್ಯ ಮಾಡಿ ನಂತರ ಊಟ ಮಾಡಬೇಕು." ಹೀಗಿರುವುದರಿಂದ ಇನ್ನೊಬ್ಬರ ಮೇಲಿನ ಅವಲಂಬನೆ ತಪ್ಪುತ್ತದೆ ಮತ್ತು ಸತ್ವ ನಾಶವಾಗುವುದಿಲ್ಲ.

## ಉಪಸಂಹಾರ

ಎಲ್ಲಾ ಸಂದರ್ಭಗಳಲ್ಲಿಯೂ ದೇವರ ಪೂಜೆ ಮಾಡಬೇಕೆಂದು ಠಾಕುರರು ಬೋಧಿಸಿದ್ದಾರೆ. ಯಾವುದನ್ನೂ ಕಡೆಗಣಿಸುವ ಹಾಗಿಲ್ಲ; ಆಹಾರ ಸೇವಿಸುತ್ತಿರಲಿ, ವಿಹಾರದಲ್ಲಿರಲಿ ಅಥವಾ ನಿದ್ರೆ ಮಾಡು ತ್ತಿರಲಿ, ಓಡಾಡುತ್ತಿರಲಿ, ಮಾತನಾಡುತ್ತಿರಲಿ ಪ್ರತಿಯೊಂದು ಸಂದರ್ಭ ದಲ್ಲಿಯೂ ಈಶ್ವರನ ಜ್ಞಾಪಕ ಇರಬೇಕು. ಹಾಗಿರುವುದೇ ಆಧ್ಯಾತ್ಮಿಕ ಜೀವನ. ಜನರು ಧರ್ಮ ಧರ್ಮ ಎಂದು ಕೂಗಾಡುತ್ತಾರೆ. ಆದರೆ ಈ ಧರ್ಮವೆನ್ನುವುದು ಅಷ್ಟು ಸುಲಭವೇ?

"ವಾಸಿಸುವ ಸ್ಥಳ—ಮನೆಯಾಗಲಿ, ಮಠವಾಗಲಿ ಎಲ್ಲವನ್ನೂ ಅಚ್ಚುಕಟ್ಟಾಗಿ ಇಡಬೇಕು, ಚೊಕ್ಕಟವಾಗಿಡಬೇಕು, ಎಲ್ಲೆಡೆಯೂ ಈಶ್ವರನ ಆಡಂಬರದ ಪೂಜೆ, ಪುರಸ್ಕಾರ ಬೇಕಾಗಿಲ್ಲ. ಇಂತಹ ಪೂಜೆಗಳೇ ಬೇರೆ, ಸ್ವಚ್ಛತೆ, ಅಚ್ಚುಕಟ್ಟುತನ ಅಥವಾ ಕಲಾಪ್ರಜ್ಞೆ ಮತ್ತು ವ್ಯವಸ್ಥಿತ ಜೀವನ ಇವುಗಳೇ ಬೇರೆ. ಪ್ರತಿಯೊಂದರಲ್ಲಿಯೂ ಚತುರನಾಗಿರು ಮತ್ತು ಎಲ್ಲವನ್ನೂ ಈಶ್ವರನಿಗೆ ಸಮರ್ಪಿಸು. ದಡ್ಡನಿಗೆ ಧರ್ಮ ಇಲ್ಲ. ಬೇಜವಾಬ್ದಾರಿ ಮನುಷ್ಯನಿಗೂ ಧರ್ಮ ಇಲ್ಲ."—ಇದು ಠಾಕುರರ ಸಂದೇಶ. ✻